
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 5 | FEBRUARY – 2024
Peer Reviewed Journal

# ಚಂದ್ರಕಾಂತ ಕುಸುನೂರ ಅವರ ಸೃಜನ ಶೀಲ ಸಾಹಿತ್ಯ

ಡಾ. ಪ್ರಕಾಶ ಎಚ್. ಸಂಗಮ
ಕನ್ನಡ ಅಧ್ಯಯನ ಸಂಸ್ಥೆ ,ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.



ಹಿರಿಯ ಸಾಹಿತಿಗಳಾದ ಚಂದ್ರಕಾಂತ ಕುಸನೂರರು ಬರೆದ ಕಥೆಗಳು ಈ ಭಾಗದ ಜನಜೀವನ ಸಂಸ್ಕೃತಿ ಯನ್ನು ಬಿಂಬಿಸುವ ಕಥೆಗಳಾಗಿವೆ. ಕುಸನೂರರ 'ತುಕ್ಕಪ್ಪಾ ಮಾಸ್ತರ' ಎಂಬ ವಿಭಿನ್ನ ಕಥೆಗಳನ್ನು ಒಳಗೊಂಡಿದೆ. ಚಂದ್ರಕಾಂತ ಕುಸನೂರರ ಕಥೆಗಳಲ್ಲಿ ಈ ಭಾಗದ ಭಾಷೆಯ ಬಗ್ಗೆ ಅಷ್ಟೊಂದು ಒಲವಿಲ್ಲ, ಆದರೆ ಬ್ರಾಹ್ಮಣ್ಯವನ್ನು ಮೀರಿನಿಲ್ಲುವ ಅನೇಕ ವಿಚಾರಗಳನ್ನು ಕೃತಿಯಲ್ಲಿ ಕಾಣಬಹುದು ಎಂಬ ರಂಗಕರ್ಮಿ ಶಂಕ್ರಯ್ಯ ಘಂಟಿಯವರ ಮಾತು ಮಹತ್ವದ್ದಾಗಿದೆ. ಬದುಕಿಗೆ ಹತ್ತಿರವಾಗುವ ಕಥೆಗಳನ್ನು ಬರೆದಾಗ ಜನರು ಅವನ್ನು ನೆನಪಿಸಿಕೊಳ್ಳುತ್ತಾರೆ. ಕುಸನೂರರ ಕಥಾ ಸಂಕಲನ ಈ ನಿಟ್ಟಿನಲ್ಲಿ ಮಹತ್ವದ್ದಾಗಿದೆ ಎಂಬ ಹಿರಿಯ ಸಾಹಿತಿ ಕಾಶೀನಾಥ ಅಂಬಲಗಿಯವರ ಮಾತು ಅನುಭವದಿಂದ ಕೂಡಿದೆ. ಕುಸನೂರರ ಕಥೆಗಳ ಮೇಲೆ ಶ್ರೀಕೃಷ್ಣ ಆಲನಹಳ್ಳಿ ಹಾಗೂ ಯು.ಆರ್ ಅನಂತ ಮೂರ್ತಿಯವರ ದಟ್ಟ ಪ್ರಭಾವವಿರುವುದನ್ನು ಕಾಣಬಹುದಾಗಿದೆ.

ಚಂದ್ರಕಾಂತ ಕುಸನೂರರ ಕಾದಂಬರಿ ಜಗತ್ತು ದೊಡ್ಡದು. ಚರ್ಚ್ ಗೇಟ್, ಗೊಹರ್‌ಜಾನ್, ಮಾಲತಿ ಮತ್ತು ನಾನು, ಕೆರೂರು ನಾಮಾ, ಯಾತನಾ ಶಿಬಿರ, ಒಂದು ಕೈಫಿಯತ್ ಕಾದಂಬರಿಗಳು ಕುಸನೂರರ ಆಸಕ್ತಿ ಹಾಗೂ ಸಮಾಜ ಗ್ರಹಿಕೆಯ ಕ್ರಮಗಳನ್ನು ಅನಾವರಣಗೊಳಿಸುತ್ತವೆ. ಕುಸನೂರರು ಬಹುಭಾಷಾ ವಿಶಾರದರಾದ್ದರಿಂದ ಅವರು ಇಂಗ್ಲಿಷ್, ಫ್ರೆಂಚ್, ಜರ್ಮನ್, ಯುಕ್ರೇನ್ ಭಾಷೆಗಳನ್ನು ಹಾಗೂ ಅಲ್ಲಿಯ ಸಾಹಿತ್ಯಕ ಬೆಳವಣಿಗೆಗಳನ್ನು ಗಮನಿಸಿ ದ್ದಾರೆ. ಕಾಫ್ಕಾ, ಕಾಮೂ, ದಾಸ್ತೊವಸ್ಕಿ ಮೊದಲಾದವರ ಕೈಯಲ್ಲಿ ಕಾದಂಬರಿ ಡಿಕೆನ್ಸ್ ಮತ್ತು ಥಾಮಸ್ ಹಾರ್ಡಿ ಯವರ ಕೈಯಲ್ಲಿ ಕಥೆ, ಜೇಮ್ಸ್ ಜಾಯ್ಸ್, ವ್ಹರ್ಜಿನೀಯಾ ವೂಲ್ಫ್ ರವರ ಕೈಯಲ್ಲಿ ಅವು ಬರೀ ತಂತ್ರವಾಗದೇ ಅವು ಜೀವ ಮತ್ತು ಸುತ್ತಲಿನ ಪ್ರಪಂಚವನ್ನು ಶೋಧಿಸಿ ತೆಗೆಯುವ ವಿಷಯಗಳಾದವು. ಜೀವ ಮತ್ತು ನಂಬಿರುವ ದೇವರುಗಳ ಶೋಧ ಪ್ರವೃತ್ತಿ ಮುಂದುವರೆಯಿತು. ದೇವರು ಹಾಗೂ ಮನುಷ್ಯನ ಅಸ್ತಿತ್ವದ ಹಾಗೂ ಕರ್ತವ್ಯದ ಬಗ್ಗೆ ಕೊನೆಯಿಲ್ಲದ ಜಿಜ್ಞಾಸೆಯಲ್ಲಿ ಇವರು ತೊಡಗಿದುದಾಗಿ ರಾಜಶೇಖರ ಮಠಪತಿ (ರಾಗಂ) ಕುಸನೂರರ ಕಾದಂಬರಿ ಗಳಿಗೆ ಬರೆದ ಮುನ್ನುಡಿಯಲ್ಲಿ ಹೇಳುತ್ತಾರೆ. ಭಾರತೀಯರು ನವೋದಯ, ಪ್ರಗತಿಶೀಲ, ನವ್ಯ ದಲಿತ ಬಂಡಾಯ ಕಾಲಘಟ್ಟಗಳ ಹಿನ್ನೆಲೆಯಲ್ಲಿ ಆಯಾ ಕಾಲದ ಪ್ರೇರಣೆ ಧೋರಣೆಗಳನ್ನು ಮೈಗೂಡಿಸಿಕೊಳ್ಳುತ್ತಾ ಕಾದಂಬರಿಗಳನ್ನು ಬೆಳೆಸಿದರು. ದೇವುಡು, ಮಾಸ್ತಿ, ಶಿವರಾಮ ಕಾರಂತ, ಕುವೆಂಪು, ಗೊರೂರು, ಚದುರಂಗ, ವ್ಯಾಸರಾಯ ಬಲ್ಲಾಳ, ಕೃಷ್ಣಮೂರ್ತಿ ಪುರಾಣಿಕ, ರಾವ್ ಬಹಾದ್ದೂರ, ಯು.ಆರ್. ಅನಂತಮೂರ್ತಿ, ಪಿ.ಲಂಕೇಶ, ಎಸ್.ಎಲ್.ಭೈರಪ್ಪ, ಶ್ರೀಕೃಷ್ಣ ಆಲನಹಳ್ಳಿ ಮೊದಲಾದವರು ಪೌರಾಣಿಕ, ಸಾಮಾಜಿಕ, ಚಾರಿತ್ರಿಕ ಹಾಗೂ ಪ್ರಾದೇಶಿಕ ವರ್ಣನೆಯ ಕಾದಂಬ ರಿಗಳನ್ನು ಬರೆದಿರುವುದು ಮಹತ್ವದ್ದಾಗಿದೆ. ರಾಜಶೇಖರ ಮಠಪತಿಯವರ ಪ್ರಕಾರ 'ಕುಸನೂರರು ತಮ್ಮ ಕಾದಂಬರಿ ಗಳಲ್ಲಿ ಬರೀ ಕಥೆಯನ್ನು ಹೇಳುವುದಿಲ್ಲ. ಅವರದು ಕರುಳು ಸಂವಾದ. ಅವರು ಪ್ರತಿಬಿಂಬಿಸಿದ್ದು, ಪರಿಶೀಲಿಸಿದ್ದು ಬರೀ ಮನುಷ್ಯನ ಆತ್ಮ ಮಾತ್ರವಲ್ಲ, ಆತ್ಮದ ಇರುವಿಕೆಗೆ ಕಾರಣವಾದ ಮನುಷ್ಯ ಕುಲಕ್ಕೆ ಕಂಟಕವಾದ ಅತ್ಯಂತ ಹೃದಯ ವಿದ್ರಾವಕ ಮತ್ತು ಕ್ಲಿಷ್ಟ ದಾರುಣ ಸಮಸ್ಯೆಗಳನ್ನು ಕಾದಂಬರಿಗಳ ಕೇಂದ್ರ ಕಾಳಜಿಯಾಗಿಸಿಕೊಂಡಿದ್ದಾರೆ' ಎಂಬುದು ಯಾತನಾ ಶಿಬಿರ, ಗೊಹರ್ ಜಾನ್ ಮಾಲತಿ ಮತ್ತು ನಾನು ಚರ್ಚಗೇಟ್ ಮೊದಲಾದ ಕಾದಂಬರಿಗಳನ್ನು ಗಮನಿಸಿದಾಗ ಅರಿವಿಗೆ ಬರುತ್ತದೆ.

ಚಂದ್ರಕಾಂತ ಕುಸನೂರರ 'ಯಾತನಾ ಶಿಬಿರ' ಕಾದಂಬರಿಯ ವೈಶಿಷ್ಟ್ಯವೆಂದರೆ, ಹೈದರಾಬಾದ್ ಕರ್ನಾಟಕದ ಪ್ರಾದೇಶಿಕತೆಯ ವರ್ಣನೆ. ಚಂದನಕೇರಿಯಲ್ಲಿ ಹೊಸದಾಗಿ ಹುಟ್ಟುಕೊಂಡಿರುವ ಕಾಲೇಜಿಗೆ ಶಿಕ್ಷಕನಾಗಲು ಬಂದಿರುವ ನಿರೂಪಕ,

ಚಂದನಕೇರಿಯ ಭೌಗೋಳಿಕ ವ್ಯಾಪ್ತಿಯ ವಿವರ ನೀಡುತ್ತಾನೆ. ಮಾರಿಕಾಂಬಿಕಾ ಆ ಊರಿನ ಪ್ರಮುಖ ದೇವತೆ. ಜಲಜಾಕ್ಷಿ ಎಂಬ ಚಿಕ್ಕ ಹೊಳೆ ಎಲ್ಲರ ಬಾಯಲ್ಲಿ ಅವ್ವ ಜಲಜಮ್ಮ ಆಗಿದ್ದಳು. ಆ ಊರಿನ ಗೌಡ , ರಾಮ ದೀಕ್ಷಿತ, ಸಾಹುಕಾರ ಶಾಮಣ್ಣ, ಮುಲ್ಲಾಸಾಬ್ ಮಠ–ಮನೆಗಳೆಂದೆಲ್ಲ ನಿರೂಪಕ ವಿವರಣೆ ನೀಡುತ್ತ, ಶಿಕ್ಷಕ ಕಾದಂಬರಿಯ ಒಳಹೊಕ್ಕು ಅದೃಶ್ಯನಾಗಿ ಬಿಡುತ್ತಾನೆ. ಊರ ಪಂಚಾಯತಿಯ ಪ್ರಮುಖರಾದ ಗೌಡ, ಸಾಹುಕಾರ, ದೀಕ್ಷಿತ ಮೊದಲಾದವರಲ್ಲಿ ಬಸವಂತ ಗೌಡನೇ ದೊಡ್ಡ ಮನುಷ್ಯ. ಊರಲ್ಲಿ ಆತನಿಗೇ ಹೆಚ್ಚಿನ ಗೌರವ. ಇವನ ದರ್ಪಕ್ಕೆ ಎಲ್ಲರೂ ಅಂಜಿ ಸಾಯುವವರೇ. ಆದರೆ ಆ ಊರ ಶಾರಿ ಒಬ್ಬಳೇ ಗೌಡನಿಗೆ ಅಂಜಲಾರದವಳು. ಲಿಂಗ ಬಸ್ಯಾನೊಂದಿಗೆ ದುಡಿತಕ್ಕಿದ್ದವಳು. ಶಾರಿಯ ಗಂಡ ಹಣದ ಆಸೆಯಿಂದ ವ್ಯಭಿಚಾರಕ್ಕಿಳಿಯಲು ಪ್ರೇರೇಪಿಸಿದಾಗ ಸಿಡಿದೆದ್ದು ಗಂಡನಿಂದ ತಪ್ಪಿಸಿಕೊಂಡು ಗೌಡರ ಆಶ್ರಯಕ್ಕೆ ಬಂದಿದ್ದಳು. ಗೌಡ ಆಕೆಯ ಮೇಲೆ ಅನುಕಂಪ ತೋರಿ ಪ್ರತ್ಯೇಕ ಮನೆ ಕಟ್ಟಿಸಿಕೊಟ್ಟಿದ್ದ. ಇದನ್ನೇ ಬಂಡವಾಳ ಮಾಡಿಕೊಂಡ ಹಳ್ಳಿಗರು ಅವಕಾಶ ಸಿಕ್ಕಾಗಲೆಲ್ಲಾ ಗೌಡನ ಹೆಸರನ್ನು ಕೆಡಿಸಲು ನೋಡುತ್ತಿದ್ದರು. ಶಾರಿ ಗೌಡರ ಚಿಲ್ಲರೇ ರಂಡೆಯಾಗಿ ಗೌಡ ಇಟ್ಟುಕೊಂಡ ಹೆಣ್ಣಾಗಿದ್ದಳು. ಸಾಹುಕಾರ ಶಾಮರಾಯ ವ್ಯಾಪಾರಸ್ಥ. ಹೆಂಡತಿ ಬಸ್ಸಮ್ಮ. ತನ್ನ ಕಿರಾಣಿ ಅಂಗಡಿಯಲ್ಲಿ ಸಾಬ್ಯಾ, ನೇಕಾರ ನಿಂಗಣ್ಣ, ದೀಕ್ಷಿತರ ರಾಮ, ಕುಲಕರ್ಣಿ, ಭೀಮ್ಯಾ ಮೊದಲಾದವರೊಂದಿಗೆ ಇಸ್ಪೀಟೆಲೆ ಆಟ ಆಡಿಕೊಳ್ಳುತ್ತಲಿದ್ದ. ಕೃಷ್ಣಾ ದೀಕ್ಷಿತ್ ಮೆಟ್ರಿಕ್ ತನಕ ಓದಿ ಒಂದೆರಡು ಸಲ ನಾಪಾಸಾಗಿ ಒಕ್ಕಲುತನ ಆರಂಭಿಸಿದ್ದ. ಅವನ ಹೆಂಡತಿ ಕುಸುಮ ಎಲ್ಲರಿಗೂ ಬೇಕಾದವಳಾಗಿದ್ದಳು. ಕುಲಕರ್ಣಿ ಭೀಮ ಬಹಳ ಅಂಜುಬುರುಕ ಮನುಷ್ಯ. ತನ್ನ ಮನೆ ಮುಂದೆ ರಂಗೋಲಿ ಹಾಕಿ, ಬಾಳೆಹಣ್ಣು ತೆಂಗಿನಕಾಯಿ ಇಟ್ಟದ್ದನ್ನು ನೋಡಿ ಚಟ್ಟನೇ ಚೀರಿ ನಡುಗಿದ್ದ.

ಈ ಕೆಲಸ ಶಾರಿಯದ್ದೇ ಎಂಬುದು ಎಲ್ಲರ ಗುಮಾನಿಯಾಗಿತ್ತು. ರಾಮಾ ದೀಕ್ಷಿತರು ಶಾರಿಯನ್ನು ಕರೆಸಿ ಹೀಗೆಲ್ಲ ಮಾಡುವುದು ಸರಿಯಲ್ಲ ಎಂದು ಬುದ್ಧಿ ಹೇಳಿದ್ದರು. ಬಸ್ಸಮ್ಮ ಒಂದು ದಿನ ರಾಮಾ ದೀಕ್ಷಿತರನ್ನು ದೈಹಿಕ ಸುಖಕ್ಕೆ ಕರೆದಾಗ ಬ್ಯಾಡ ಇವತ್ತು ರಾಮ ನವಮಿ ಎಂದು ಹೇಳಿ ಹೊರಟುಹೋಗಿದ್ದ. ಇಂಥವನನ್ನು ಶಾರಿ ಮನೆಗೆ ಕಳಿಸುತ್ತಾರೆಂದು ಬಸ್ಸಮ್ಮ ಕಿಸ್ಸಕ್ಕನೇ ನಕ್ಕಿದ್ದಳು. ಆದರೆ ಸಾಹುಕಾರ ಶಾಮಣ್ಣನ ಸಲಹೆಯಂತೆ ರಾಮಣ್ಣ.. ನೀ ಪಂಚಾಯ್ತಿಗಿ ಸೇರಬ್ಯಾಡ, ನಮ್ಮ ನಿಮ್ಮ ಪಂಚಾತಿಲಿಂದ ಆಗೂದಾದ್ರೂ ಏನು? ಎಂಬ ಮಾತಿಗೆ ಒಪ್ಪದಾಗ ಶಾರಿ ಮನೆಗೆ ಹೋಗುವುದು ಸ್ಥಗಿತವಾಯಿತು.

ಗೌಡರ ಹೊಲದಲ್ಲಿ ಜೋಳದ ರಾಶಿ ನೋಡುವಂತಿತ್ತು. ಊರಿಗೇ ಆಂತ್ರಣವಿತ್ತಿದ್ದ ಗೌಡ. ಗೌಡರ ವಿರೋಧಿಗಳಾದ ಶಾಮಣ್ಣ, ಭೀಮ ಆ ದಿನ ಊರಲ್ಲಿ ಇರಲಿಲ್ಲ. ಕರಿ ಹೊಲದ ಸಾಬ್ಯಾ ಗೌಡರ ಹೊಲದಲ್ಲಿ ಕಂಡು ಎಲ್ಲರಿಗೂ ಆಶ್ಚರ್ಯ. ಸಾಬ್ಯಾ ತಾಯಿಯ ಕಡೆಯಿಂದ ಕೊರವ. ತಂದೆಯ ಕಡೆಯಿಂದ ಲಿಂಗಾಯತರವ. ಈತನ ತಂದೆ ಗುರುಲಿಂಗ ಸ್ವತಂತ್ರ ಬೋಧಕನಾಗಿದ್ದ. ಚಂದನಕೇರಿಯ ಮೇಲೆ ರಜಾಕಾರರ ಹಾವಳಿನಡೆದಾಗ ಈ ತಂದೆ ಮಗನ ಸಾಹಸದಿಂದ ಚಂದನಕೇರಿ ಸುಟ್ಟು ಭಸ್ಮವಾಗುವುದು ತಪ್ಪಿತ್ತು. ಗೌಡರ ಮನೆ ಮೇಲೆ ರಜಾಕಾರರು ದಾಳಿ ಮಾಡಿದಾಗ ಇವರ ಸಹಾಯಕ್ಕೆ ಬರದೇ ಸಾಹುಕಾರರ ಸಹಾಯಕ್ಕೆ ಹೋದರು ಎಂಬ ಭಾವನೆಯಿಂದ ಗೌಡರಿಗೆ ಸಾಬ್ಯಾನ ಮೇಲೆ ಸಿಟ್ಟಿತ್ತು. ಆದರೆ, ಗೌಡನ ಮನೆ ವಿಚಾರ ಗುರುಲಿಂಗ ಸಾಬ್ಯಾನಿಗೆ ಗೊತ್ತೇ ಇರಲಿಲ್ಲ. ಇಂಥದ್ದರಲ್ಲಿ ಸಾಬ್ಯಾ ತನ್ನಲ್ಲಿ ಬಂದಿದ್ದ ಕಾರಣ ಏನಿರಬಹುದೆಂದು ಗೌಡ ಕೇಳಿದಾಗ ಸಾಬ್ಯಾ ತಾನು ತನ್ನ ಹೊಲದಾಗ ಬಾವಿ ತೋಡುವ ಸಲುವಾಗಿ ಶಕಾವಿ ಸಾಲಕ್ಕೆಂದು ಕಚೇರಿಗೆ ಅರ್ಜಿ ಹಾಕಿದ ವಿಷಯ ತಿಳಿಯಿತು. ಅದಕ್ಕಾಗಿ ಸಾಲ ಮಂಜೂರು ಮಾಡಿಸುವುದಕ್ಕಾಗಿ ಗೌಡರ ಸಹಾಯ ಕೇಳಲು ಬಂದಿದ್ದ. ಇದನ್ನು ಕೇಳಿದ ಗೌಡ ಸಹಾಯ ಮಾಡುತ್ತೇನೆಂದು ಹೇಳಿ ಕಳಿಸಿದ.

ಚಂದನ ಕೇರಿಯ ದಕ್ಷಿಣದಲ್ಲಿ ದ್ಯಾಮವ್ವನ ಗುಡ್ಡ. ತುದಿಗೆ ಗುಡಿ. ಇದು ಹರಿಜನ ದೇವತೆ. ಹೊಲೆಯರ ನಲವತ್ತು ಗುಡಿಸಲುಗಳು ಅಲ್ಲಿದ್ದವು. ಇವರಲ್ಲಿ ರಂಗಪ್ಪನ ಸ್ಥಿತಿ ಚೆನ್ನಾಗಿತ್ತು. ಈತ ಮೆಟ್ರಿಕ್ ಪಾಸಾಗಿದ್ದ. ಬೊಂಬಾಯಿಯಲ್ಲಿ ದುಡಿತಕ್ಕೆ ಹೋಗಿದ್ದ. ಅಲ್ಲಿಯ ಕೂಲಿಕಾರರ ಜೊತೆ ಸೇರಿ ಅನೇಕ ಮೋರ್ಛಾಗಳಲ್ಲಿ ಭಾಗಿಯಾಗಿ ಸಂಘಟನೆ ಕಾರ್ಯದಲ್ಲಿ ಚೆನ್ನಾಗಿ ಅನುಭವ ಪಡೆದಿದ್ದ. ಪ್ರಾಮಾಣಿಕತೆಯಿಂದ ತನ್ನ ಹಕ್ಕುಗಳಿಗಾಗಿ ಹೋರಾಡುವಲ್ಲಿ ತಪ್ಪಿಲ್ಲ ಎಂದು ಆತನ ಭಾವನೆಯಾಗಿತ್ತು. ಇವನ ಪ್ರಯತ್ನದ ಫಲವಾಗಿ ಹರಿಜನರಿಗಾಗಿ 'ಮಂಗಲ ಕಾರ್ಯಲಯ ಸಿದ್ಧವಾಗಿತ್ತು. ಅದರ ಉದ್ಘಾಟನೆಗಾಗಿ ನಾಯಕ ತಿಮ್ಮಪ್ಪನನ್ನು ಆಹ್ವಾನಿಸಲಾಗಿತ್ತು. ಅದರ ಅಧ್ಯಕ್ಷತೆಯನ್ನು ರಂಗಪ್ಪ ದೀಕ್ಷಿತ್ ವಹಿಸಿಕೊಂಡಿದ್ದ. ಕಾರ್ಯಕ್ರಮಕ್ಕೆ ಗೌಡರೂ ಆಗಮಿಸಿದ್ದರು. ಕೃಷ್ಣಾ ದೀಕ್ಷಿತ್ ಹಾಗೂ ಬಸವಂತಗೌಡರು ಒಲ್ಲದ ಮನಸ್ಸಿನಿಂದ ಒಂದಿಷ್ಟು ತಿಂಡಿ ತಿಂದು ಮರಳಿದರು. ಆದರೆ ದಾರಿಯಲ್ಲಿ ಬರುತ್ತ ತಾವು ತಿಂಡಿ ತಿಂದ ವಿಷಯ ಊರಲ್ಲಿ ಯಾರಿಗೂ ಹೇಳಬಾರದೆಂದು ಒಪ್ಪಂದ ಮಾಡಿಕೊಂಡರು. ಆದರೆ ಈ ಸಣ್ಣ ಘಟನೆ ದೀಕ್ಷಿತನ ಮೇಲೆ ಬಹಳಷ್ಟು ಪರಿಣಾಮ ಬೀರಿ ಅವನ ಜೀವನಕ್ಕೆ ಹೊಸ ತಿರುವು ನೀಡಿತು. ಜಾಗೃತನಾಗಿ ಹೊಸ ಹೊಸ ವಿಚಾರಗಳನ್ನು ಬೆಳೆಸಿಕೊಂಡ. ಜಾತಿಯ ಮೇಲಿದ್ದ ಅವನ ಅಭಿಮಾನ ಹುಸಿಯಾಯಿತು. ಬ್ರಾಹ್ಮಣ ಹೊಲೆಯ ಎಂಬ ಭೇದಭಾವ ಅರ್ಥವಿಲ್ಲವೆಂದು ಅವನಿಗೆ ಮನವರಿಕೆಯಾಯಿತು.

ಈ ನಡುವೆ ನೇಕಾರ ನಿಂಗಣ್ಣನ ಕೊಲೆಯ ಆರೋಪದ ಮೇಲೆ ಸಾಹುಕಾರ ಶ್ಯಾಮಣ್ಣನನ್ನು ಪೊಲೀಸರು ಕರೆದುಕೊಂಡು ಹೋಗುತ್ತಾರೆ. ಸಹುಕಾರನ ಹೆಂಡತಿ ಬಸ್ಸಮ್ಮ ಗಂಡನಿಂದ ದೂರಾಗಿ ತವರು ಮನೆಗೆ ಹೋಗುತ್ತಾಳೆ. ರಂಗಪ್ಪ ಹಾಗೂ ಕೃಷ್ಣಾದೀಕ್ಷಿತ ರಿಬ್ಬರೂ ಒಂದೇ ರೀತಿಯ ವಿಚಾರಧಾರೆಯನ್ನು ಹೊಂದಿದವರು. ಇವರಿಗೆ ಊರಿನ ಬಗ್ಗೆ ಕಾಳಜಿ. ಹಿಂಸೆ, ಅನ್ಯಾಯ, ಜಾತೀಯತೆ, ಇವೆಲ್ಲದರ ಬಗ್ಗೆ ಚಿಂತೆ. ಇವರು ಚಂದನಕೇರಿಯ ಜನರ ಬಗ್ಗೆ ವಿಚಾರಿಸುತ್ತ ನೊಂದುಕೊಂಡರು. ಚಂದನ ಕೇರಿಯ ಜಾತ್ರೆಯ ದಿನದಂದು 'ಗೂಳಿ' ಹುಚ್ಚೆದ್ದು ಜನರ ಗುಂಪಿನಲ್ಲಿ ಓಡಾಡಲಾರಂಭಿಸಿತು. ಗಾಬರಿಯಿಂದ ಜನರೆಲ್ಲ ಅಲ್ಲಲ್ಲಿ ಓಡಿದರೆ, ಅನೇಕರು ಗುಡಿಯೊಳಗೆ ನುಗ್ಗಿದರು. ಇದರಿಂದ ಕೋಪಗೊಂಡ ಪೂಜಾರಿ, ಎಲ್ಲರನ್ನೂ ಬೈಯ್ಯತೊಡಗಿದ. ಆಗ ಕೆಳಜಾತಿಯ ಯುವಕ

ಅವನ್ನು ವಿರೋಧಿಸತೊಡಗಿದ. ಆತ ತುಂಟತನದಿಂದ 'ನಿಮ್ಮ ದೇವಿ ಇಂಥ ಅಂಜಬುರುಕಳೇನ್ರೀ ಪೂಜಾರಿ? ಎಂದು ಸತ್ಯವನ್ನು ನುಡಿದು ಓಡತೊಡಗಿದ.

ಚಂದನ ಕೇರಿಯಲ್ಲಿ ಮೃಗಶಿರ ಪ್ರವೇಶ ಆರಂಭಗೊಂಡರೂ ಮಳೆಯ ಸೂಚನೆ ಕಾಣದೆ ಎಲ್ಲಡೆ ಬರಗಾಲ ಆರಂಭವಾಗುತ್ತದೆ. ಎಲ್ಲೆಡೆ ಹಾಹಾಕಾರ, ನೀರು ಮೇವಿಗಾಗಿ ದನಕರುಗಳು ಒದ್ದಾಡುತ್ತವೆ. ಜನರಲ್ಲ ಗುಳೇ ಕಟ್ಟಿ ಕೊಂಡು ಹೊರಡುತ್ತಾರೆ. ಸಾವಿನ ಭಯ ಎಲ್ಲರನ್ನೂ ಆವರಿಸುತ್ತದೆ. ಬ್ರಾಹ್ಮಣ, ಶೂದ್ರ, ಉಚ್ಚ–ನೀಚ, ಮೇಲು–ಕೀಳುಜಾತಿ ಎಲ್ಲರ ಹಸಿವು ಒಂದೇ. ಎಲ್ಲರಿಗೂ ಇದರ ಅರಿವಾಗುತ್ತದೆ. ಈ ಬರಗಾಲವೇ ಎಲ್ಲರನ್ನೂ ಆತ್ಮಜ್ಞಾನದಿಂದ ಎಚ್ಚರಿಸುತ್ತದೆ. ಸಾವು ಮುಂದೆ ಬಂದಾಗ ಆತ್ಮಜ್ಞಾನ ಆದರೇನು ಫಲ? ಅಂತಹ ತಿಳುವಳಿಕೆ ಮುಕ್ತಿಗೆ ನಾಂದಿ ಯಾಗಬಹುದೇ ಹೊರತು ಬದುಕಿಗೆ ಬೆಳಕಾಗುವುದಿಲ್ಲ. ಇದು ಕೃಷ್ಣಾ ದೀಕ್ಷಿತ್ ಕಂಡುಕೊಂಡ ಸತ್ಯ. ಚಂದನ ಕೇರಿ ಯಲ್ಲಿ ಗಂಜಿ ಕೇಂದ್ರಗಳು ಆರಂಭಗೊಂಡವು. ಊರಿನ ಎಲ್ಲರೂ ಗುಳೇ ಹೊರಟರು. ರಂಗಪ್ಪನೂ ಕೂಡ ಊರು ಬಿಡುವ ಮೊದಲೇ ಈ ಲೋಕವನ್ನೇ ಬಿಟ್ಟುಹೋದನು. ಇನ್ನೊಂದು ಕಡೆ ಗೌಡರಿದ್ದ ಬಸ್ಸಿನಲ್ಲಿ ಲಿಂಗಬಸ್ಯಾ ಬಂದು ಗೌಡರ ಕ್ಷಮೆ ಕೇಳುತ್ತಾನೆ. ಅವನನ್ನು ಕ್ಷಮಿಸಿ ಗೌಡರು ಶಾರಿಯ ಕಡೆ ಕಳಿಸುತ್ತಾರೆ.

ಶಾರಿ ಮತ್ತು ಲಿಂಗಬಸ್ಯಾ ಇಬ್ಬರೂ ಹೊಟ್ಟೆ ತುಂಬಿಸಿಕೊಳ್ಳಲು ಬೊಂಬಾಯಿಗೆ ಹೋಗುತ್ತಾರೆ. ಬರಗಾಲದ ಬಿಸಿ ಕೃಷ್ಣಾ ದೀಕ್ಷಿತನಿಗೂ ತಟ್ಟುತ್ತದೆ. ಆತ ದುಡಿಯುವುದಕ್ಕಾಗಿ ಕೂಲಿಗೆ ಹೋದಾಗ ಆತನ ಜೊತೆ ಕಂಟ್ರಾಕ್ಟರ್‌ನೊಬ್ಬ ನಗೆಯಾಡಿತ್ತಾನೆ. ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾನೆ. ಇದನ್ನೆಲ್ಲಾ ಕೇಳಿದ ದೀಕ್ಷಿತನ ಮೈ ನಡುಗುತ್ತದೆ. ಆತ ಹಿಂದಿರುಗಿ ಬರುತ್ತಾನೆ. ನಂತರ ಚಂದನಕೇರಿಯಲ್ಲಿ ಬರಗಾಲದೊಂದಿಗೆ ಕಾಲರಾ ರೋಗ ಭಯಂಕರ ರೂಪ ತಾಳಿ ಜನರು ಸಂಕಟದಲ್ಲಿ ಬಿದ್ದು ಒದ್ದಾಡುತ್ತಾರೆ. ಮನುಷ್ಯರ ಹೆಣಗಳು ಉರುಳತೊಡಗುತ್ತವೆ. ಆಗ ಚಂದನಕೇರಿ ಭಯಂಕರ ಯಾತನಾ ಶಿಬಿರವಾಗಿ ಕಾಣುತ್ತದೆ. ಇದಕ್ಕೆ ರಂಗಪ್ಪನೂ ಬಲಿಯಾಗುತ್ತಾನೆ. ದೀಕ್ಷಿತನ ಹೆಂಡತಿ ಕುಸುಮಾ ಕೂಡ ಬಲಿಯಾಗುತ್ತಾಳೆ. ಆಗ ಒಂಟಿಯಾದ ರಾಮಾ ದೀಕ್ಷಿತ ಚಂದನಕೇರಿಯನ್ನು ತೊರೆದು ಹೋಗುತ್ತಾನೆ. ಕಾದಂಬರಿಯ ಕೊನೆಯಲ್ಲಿ ಮತ್ತೆ ಮಾರಿಕಾಂಬಾ ಕಾಲೇಜು ಕಾಣಿಸಿಕೊಳ್ಳುತ್ತದೆ. ಊರಲ್ಲಿ ಇಷ್ಟೆಲ್ಲಾ ರಾದ್ಧಾಂತ ವಾದರೂ ತಮಗೂ ಅದಕ್ಕೂ ಸಂಬಂಧವೇ ಇಲ್ಲ ವೆಂಬಂತೆ ಕಾಲೇಜು ದೂರವೇ ಉಳಿದಿತ್ತು. ಶಿಕ್ಷಣ, ನಾಗರಿಕತೆ, ವಿಚಿತ್ರ ನಂಬಿಕೆ ಗಳಿಂದ ಕಾಲೇಜಿನವರು ಊರಿನವರಿಗೆ ಹೊರಗಿನವರಾಗಿದ್ದರು. ಕೇವಲ ಹುಟ್ಟೂರಿನ ನೆಪದಿಂದ ಕೆಲಸ ಗಿಟ್ಟಿಸಿಕೊಂಡಿದ್ದರು. ನಿರೂಪಕನಾದ ಕಾಲೇಜಿನ ಅಧ್ಯಾಪಕ ಎಲ್ಲರಂತೆ ತಟಸ್ಥನಾಗಿದ್ದ. ಸರಕಾರದ ಆಜ್ಞೆಯಂತೆ ಕಾಲರಾ ಕಾರಣ ಎರಡು ತಿಂಗಳು ಕಾಲೇಜಿಗೆ ರಜ ಘೋಷಿಸಲಾಯಿತು. ಇನ್ನೊಮ್ಮೆ ಈ ಯಾತನಾ ಶಿಬಿರಕ್ಕೆ ಬರಲೇಬಾರದೆಂದು ಭಾವಿಸಿ ಅಲ್ಲಿಯ ಅಧ್ಯಾಪಕ ಇಲ್ಲಿಯ ನೆನಪುಗಳನ್ನೆಲ್ಲಾ ತನ್ನದಾಗಿಸಿಕೊಂಡು ಹೊರಡುತ್ತಾನೆ. ಹೀಗೆ ಚಂದ್ರಕಾಂತ ಕುಸನೂರರು ತಮ್ಮ 'ಯಾತನಾ ಶಿಬಿರ' ಕಾದಂಬರಿಯ ಮೂಲಕ ಆಧುನಿಕ ಯುಗದ ಗ್ರಾಮೀಣ ಜನತೆಯ ಜೀವನಾನುಭವ, ಶಿಕ್ಷಣ, ಜಾತೀಯತೆ ರಾಜಕೀಯ ಹಾಗೂ ಕಾಮ ಸಂವೇದನೆಗಳನ್ನು ಓದುಗರ ಗಮನಕ್ಕೆ ತಂದು ಹೊಸ ಮೌಲ್ಯಗಳಲ್ಲಿ ಐಕ್ಯತೆ ಹಾಗೂ ಸತ್ಯವನ್ನು ಕಂಡು ಕೊಂಡಿರುವುದು ಮಹತ್ವದ್ದಾಗಿದೆ.

ಚಂದ್ರಕಾಂತ ಕುಸನೂರರ ಕಾದಂಬರಿಗಳಲ್ಲಿ ಗ್ರಾಮೀಣ ಜೀವನಾನುಭವ ಹಾಗೂ ಮನಷ್ಯ ಸ್ವಭಾವಗಳ ಕರಾರುವಕ್ಕಾದ ಚಿತ್ರಣವನ್ನು ಕಾಣಬಹುದಾಗಿದೆ. ಅವರ 'ಗೋಹರಜಾನ್ ಮಾಲತಿ ಮತ್ತು ನಾನು ಕಾದಂಬರಿ ಮೂರು ತಲೆಮಾರುಗಳ ಬದುಕಿನ ಚಿತ್ರಣವನ್ನು ಒಳಗೊಂಡಿದೆ. ಒಂದು ಬಡ ಬ್ರಾಹ್ಮಣ ಕುಟುಂಬದ ವ್ಯಥೆ, ಜಗಳ, ಕಿರಿಕಿರಿ, ಸಣ್ಣತನ, ಮೋಸ, ವಂಚನೆ ಮೊದಲಾದವುಗಳನ್ನು ಈ ಕಾದಂಬರಿ ಮುಕ್ತವಾಗಿ ಬಿಚ್ಚಿಡುತ್ತದೆ. ಕಥಾ ನಾಯಕ ರವೀಂದ್ರ ಚಂದ್ರಿ, ಗೋಹರ್ ಜಾನ್ ರೊಂದಿಗೆ ಇಟ್ಟುಕೊಂಡ ಸಂಬಂಧಗಳು ಓದುಗರನ್ನು ಚಿಂತನೆಗೆ ತೊಡಗಿಸುತ್ತವೆ. ಕಲಬುರಗಿ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಜನರ ಆಲೋಚನಾ ವಿಧಾನ, ಜಾತಿ ರಾಜಕೀಯ, ವೀರಶೈವ, ಲಿಂಗಾ ಯತ, ಬ್ರಾಹ್ಮಣ, ಕುರುಬ ಜನಾಂಗದ ವ್ಯವಹಾರಿಕ ರೀತಿನೀತಿಗಳು , ಮುಸ್ಲಿಂ ಜನಾಂಗದ ಜಿಗುಟುತನದ ಮಾದರಿ ಗಳು, ಸ್ವಾಮಿಗಳ ಮುಖವಾಡದ ಹಿಂದಿನ ಸತ್ಯಗಳು, ಬೋಳುಗಂಡ ಸ್ವಾಮೀಜಿ ಬ್ರಾಹ್ಮಣ ಮನೆತನದ ರಿಂದಾಬಾಯಿ ಯನ್ನು ಯಾಮಾರಿಸಿ ಆಕೆಯ ಗಂಡ ದೇವರಾಯ ದಿವಂಗತನಾದ ದಿನಗಳಲ್ಲಿ ಆಕೆಯೊಂದಿಗೆ ತೋಟದ ವ್ಯವಹಾರ ನಡೆಸುವುದಲ್ಲದೇ ದತ್ತಾತ್ರೇಯ ಮನೆತನದ ಅನ್ಯೆಕ್ಯತೆಯನ್ನೇ ಬಂಡವಾಳವಾಗಿಸಕೊಂಡು ಲಾಭಗಿಟ್ಟಿಸಿಕೊಳ್ಳುವುದು ಈ ಕಾದಂಬರಿಯಲ್ಲಿ ಪ್ರಾರಂಭದಲ್ಲಿ ಎದ್ದುಕಾಣುವ ದೃಶ್ಯವಾಗಿದೆ.

ಕಾದಂಬರಿಯ ಕೇಂದ್ರಬಿಂದು ರವೀಂದ್ರ ಕುಲಕರ್ಣಿ ತನ್ನ ಮನೆತನದ ಆಗುಹೋಗುಗಳನ್ನು ಗಮನಕ್ಕೆ ತರುವ ರೀತಿ, ಆಸ್ತಿಯ ವಿಷಯ, ಕೋರ್ಟುಕಚೇರಿ ವಿಷಯದಲ್ಲಿ ನಿರ್ಲಿಪ್ತತೆ ತೋರುವುದು ಓದುಗರ ಗಮನ ಸೆಳೆಯುತ್ತದೆ. ರವೀಂದ್ರನ ತಂದೆ ಗೋಪಾಲರಾಯ, ಚಿಕ್ಕಪ್ಪಂದಿರಾದ ವಿಠ್ಠಲರಾಯ, ಮುರಲೀಧರ ರಾಯರ ಬಗ್ಗೆ ರವೀಂದ್ರ ಹೇಳುವ ವಿಚಾರಗಳು ಅವರ ವ್ಯವಹಾರಿಕ ಜಾಣ್ಮೆ ಹಾಗೂ ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡು ಬಾಳಲು ಅವರು ನಡೆಸುವ ಹುನ್ನಾರಗಳೇ ಆಗಿವೆ. ರಿಂದಾಬಾಯಿ ಆಸ್ತಿಯ ವಿಷಯದಲ್ಲಿ ಇವರ ಮಾತು ಕೇಳದೇ ಜಿದ್ದು ತೋರಿ ಹಾಳಾಗುತ್ತಾಳೆ. ರವೀಂದ್ರನ ಚಿಕ್ಕಪ್ಪಂದಿರು ರಿಂದಾಬಾಯಿ ಯಿಂದ ತೋಟ ಪಡೆಯಲು ನೋಡಿದರೆ ಅವಳು ಅದನ್ನ ಬೋಳಗಂಡ ಸ್ವಾಮೀಜಿಗೆ ಮಾರಿ ಎಲ್ಲರಿಗೂ ಪಾಠ ಕಲಿಸುತ್ತಾಳೆ. ದಾಯಾದಿ ಶ್ರೀಪತಿ ಹಾಗೂ ಮನೆಯವರೆಲ್ಲರಿಗೆ ಸಮಸ್ಯೆ ತಂದೊಡ್ಡುವ ರಿಂದಾಬಾಯಿಯ ವರ್ತನೆ ಆಶ್ಚರ್ಯವನ್ನುಂಟುಮಾಡುತ್ತದೆ.

ರವೀಂದ್ರ ತನ್ನ ಮನೆತನದ ಆಗುಹೋಗುಗಳ ಬಗೆಗೆ ತಲೆಕೆಡಿಸಿಕೊಳ್ಳುವುದಿಲ್ಲ. ರಾಂಪುರ, ಕೆಸರಟಗಿ, ಇಸ್ಲಾಮ್‌ಪೂರ ಗಳಲ್ಲಿ ಕುಲಕರ್ಣಿ ಕಾಯಕದಿಂದ ಹೆಸರಾದ ರವೀಂದ್ರನ ಮನೆತನ ಮನೆ ಕಂದಾಯ, ಮಳೆಬೆಳೆ ಲೆಕ್ಕಾಚಾರಕ್ಕೆ ಹೆಸರಾಗಿತ್ತು. ಕಲಬುರ್ಗಿಯ

ಪೂರ್ವಕ್ಕೆ ಎಂಟು ಕಿಲೋಮೀಟರ ದೂರದಲ್ಲಿ ಇದ್ದ 'ಹೊಸೂರು' ಕಾದಂಬರಿಯ ಮುಖ್ಯ ಸ್ಥಳವಾಗಿತ್ತು. ಇಲ್ಲಿ ಲಿಂಗಾಯತರ ಕೋಮಿನ ಸಿದ್ದೇವಪ್ಪ, ಕುರುಬ ಜನಾಂಗದ ಮಾಳಿಂಗ ರಾಯ ಪ್ರಬಲ ಕೋಮಿನವರ ಪ್ರತಿಷ್ಠಿತ ದೇವರಾಗಿದ್ದವು. ಹಳ್ಳಿಯ ಜನ ತಮ್ಮ ಪ್ರತಿಷ್ಠಿತ ದೇವರ ಜಾತ್ರೆ, ಉತ್ಸವ, ಪುರಾಣ ಮೊದಲಾದ ಮಂಗಳ ಕಾರ್ಯಕ್ರಮಗಳಲ್ಲಿ ತಮ್ಮ ಭಯ-ಭಕ್ತಿ ತೋರಿ ಗಮನ ಸೆಳೆದುಕೊಳ್ಳುತ್ತಿದ್ದರು. ಕಲಬುರ್ಗಿಯ ಅಂದಿನ ಭೌಗೋಳಿಕ ವಾತಾವರಣ, ಧಾರ್ಮಿಕ ಪರಿಸರ, ಸಾಮಾಜಿಕ ಪರಿಸರ ಹಾಗೂ ಜನರ ಸಂಕುಚಿತ ಸ್ವಾರ್ಥ ಮನೋಧೋರಣೆಯನ್ನು ಕುಸನೂರರು ಈ ಕಾದಂಬರಿಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಕಥಾನಾಯಕ ರವೀಂದ್ರನ ಕಾಲೇಜಿನ ಬದುಕಿನಲ್ಲಿ ಪ್ರೀತಿ ಪ್ರಣಯಗಳು ಕಾಣುವುದಿಲ್ಲ. ಆದರೆ ರವೀಂದ್ರನ ಕೈಲಿ ಟಿವಿಷನ್ ಕೇಳಿಕೊಳ್ಳಲು ಬಂದ ಮಾಲತಿ ಮೆಟ್ರಿಕ್ ನಲ್ಲಿ ಓದುತ್ತಿರುವ ಹದಿ ಹರೆಯದ ಯುವತಿ. ರವೀಂದ್ರ ಅವಳನ್ನು ಕಲಿಕೆಗೆ ಸಜ್ಜುಗೊಳಿಸಿದುದಲ್ಲದೇ ಅವಳ ಸುಂದರ ರೂಪಕ್ಕೆ ಮರುಳಾಗಿ ಹೆಂಡತಿಗಿಂತ ಹೆಚ್ಚಾಗಿ ಆಕೆಯ ಮೇಲೆ ಪ್ರೀತಿ ತೋರುತ್ತಾನೆ. ಅವಳಿಗೆ ಪಾಠ ಹೇಳಿಕೊಡುವಾಗ ಅವಳು ಓದಿನಲ್ಲಿ ತಲ್ಲೀನಳಾದರೆ ಇವನು ಅವಳ ಸೌಂದರ್ಯ ಸವಿಯುವುದರಲ್ಲಿ ತಲ್ಲೀನನಾಗುತ್ತಾನೆ. ಕ್ರಮೇಣ ಇಬ್ಬರಲ್ಲಿ ಸಲುಗೆ ಬೆಳೆದು ಮಾಲತಿಗೆ ಆತನಲ್ಲಿ ಭಕ್ತಿ, ಪ್ರೀತಿಮಿಶ್ರಿತ ಸಮರ್ಪಣಭಾವ ಉಂಟಾಗುತ್ತದೆ. ಕಾಮವೋ ಪ್ರೇಮವೂ ತಿಳಿಯದ ಅದ್ಬುತ ಸೆಳೆತದಿಂದಾಗಿ ಇಬ್ಬರೂ ದಾರಿ ತಪ್ಪುತ್ತಾರೆ. ಒಂದುದಿನ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ರವೀಂದ್ರ ಅವಳನ್ನು ಸಂಪೂರ್ಣ ನೋಡಬೇಕೆಂದು ಆಸೆ ವ್ಯಕ್ತಪಡಿಸುತ್ತಾನೆ. ಇವಳು ಅದಕ್ಕೆ ಒಪ್ಪಿ ಎಲ್ಲವನ್ನೂ ತೋರಿಸಿ ಲೈಂಗಿಕವಾಗಿ ಸಮರ್ಪಿಸಿ ಕೊಂಡುಬಿಡುತ್ತಾಳೆ. ಇಂಥ ಸನ್ನಿವೇಶಗಳಲ್ಲಿ ಪ್ರೀತಿಯ ಆವೇಶ ಎದ್ದುತೋರುತ್ತದೆ. ಮಾಲತಿಯ ಮೀಸಲು ಮೈಯ್ಯ ಸುಖ ಅನುಭವಿಸಿ ಅವಳ ಕನ್ಯತ್ವ ಹಾಳುಮಾಡಿದ ರವೀಂದ್ರನ ಬಾಯಿಂದ ಒಂದು ಬಾರಿಯೂ ಪ್ರೀತಿ ಪ್ರೇಮದ ಮಾತು ಬರುವುದಿಲ್ಲ. ತಾನು ಹೆಂಡತಿಯುಳ್ಳ ಸಂಸಾರಸ್ಥ, ತನ್ನ ಹೆಸರಿಗೆ ಕುಂದು ತರಬಾರದೆಂದು ಮಾಲತಿಗೆ ಕೇಳಿಕೊಳ್ಳುವ ರವೀಂದ್ರನ ಸ್ವಾರ್ಥ ಓದುಗರಿಗೆ ಹೇಸಿಗೆ ತರಿಸುತ್ತದೆ.

ಒಂದು ಅಮಾಯಕ ಹುಡುಗಿಯನ್ನು ಲೈಂಗಿಕವಾಗಿ ಅನುಭವಿಸುವ ರವೀಂದ್ರ ಮುಂದೆ ಒಬ್ಬ ಶಿಕ್ಷಕನಾಗಿ ಸಮಾಜದಲ್ಲಿ ಒಳ್ಳೆಯ ಬಾಳು ಬಾಳುತ್ತಾನೆ. ತನ್ನ ಚಿಕ್ಕಮ್ಮ ರಿಂದಾಬಾಯಿಯ ತೋಟದ ವಿಷಯದಲ್ಲಿ ರವೀಂದ್ರ ನಿರ್ಲಿಪ್ತ ಸ್ವಭಾವ ಬೆಳೆಸಿಕೊಳ್ಳುತ್ತಾನೆ. ಜೊತೆಗೆ ಗಜಲ್ ಸುಂದರಿ ಗೊಹೇರ್ ಜಾನ್ ಳ ಸಂಪರ್ಕಕ್ಕೂ ಬರುತ್ತಾನೆ. ಅವಳ ಮಗಳು ನರ್ಗಿಸ್‌ಳಿಗೆ ಟಿವಿಷನ್ ಹೇಳುತ್ತಾನೆ. ಅವಳನ್ನು ಪರಿಚಯಿಸಿದ ನರಸಿಂಹರಾಯರನ್ನು ಬಿಟ್ಟು ತಾನೊಬ್ಬನೇ ಗೊಹೆರ್ ಜಾನ್ ಳನ್ನು ಭೇಟಿಯಾಗುತ್ತ ಸಲಿಗೆ ತೋರುತ್ತಾನೆ. ರವಿ ಮಾಲತಿ ಹಾಗೂ ಗೊಹೆರ್‌ಜಾನ್ ರ ವಿಷಯದಲ್ಲಿ ಅನವಶ್ಯಕವಾಗಿ ತಲೆಹಾಕಿ ಸಂಕಟ ತಂದುಕೊಳ್ಳುವುದು ಚಿಂತನೆಗೆ ತೊಡಗಿಸುತ್ತದೆ. ಬಿಡಿಸಿಕೊಳ್ಳ ಬೇಕೆಂದರೂ ಬಿಡಿಸಿಕೊಳ್ಳಲಾರದ ಸಂಬಂಧದಲ್ಲಿ ಸಿಲುಕಿ ಸಮಾಜ ಹಾಗೂ ಪೊಲೀಸರ ಕಣ್ಣಿಗೂ ಬೀಳುವುದು ಕಾದಂಬರಿಯ ತಿರುವಿಲ್ಲಿ ಬರುವ ಪ್ರಮುಖ ಘಟನೆಯಾಗಿದೆ. ರವೀಂದ್ರ ಪ್ರೀತಿಸಿದ ಇನ್ನೊಬ್ಬ ಹೆಣ್ಣು ಗೊಹೆರ್ ಜಾನ್ ಒಬ್ಬ ತವೈಫ್. ಹಾಗಾಗಿ ಅವಳ ಹಿಂದೆ ಹಲವರ ಕಣ್ಣಿರುತ್ತದೆ. ಅವಳು ಕೇರಿಯಲ್ಲಿ ಇರಬಾರದೆಂದು ಅಲ್ಲಿಯ ಜನರ ಆಗ್ರಹ ಹೆಚ್ಚಾಗಿ ಅವಳು ಅದನ್ನು ಎದುರಿಸಲಾಗದೇ ಮುಂಬೈಗೆ ಹೊರಡುತ್ತಾಳೆ. ಅಲ್ಲಿಂದ ಅಜಮೀರಿಗೆ ಪ್ರಯಾಣ ಬೆಳೆಸುತ್ತಾಳೆ. ಕಲಬುರಗಿ ಬಿಡುವಾಗ ರವೀಂದ್ರನಿಗೆ ಪ್ರೀತಿಯ ಮುತ್ತು ಕೊಟ್ಟು ತನ್ನ ಬಗ್ಗೆ ಗೌರವ ಸಂವೇದನೆಗಳನ್ನು ತೋರಿದ ಆತನಿಗೆ ತುಂಬು ಹೃದಯದಿಂದ ನೆನೆದು ವಿದಾಯ ಹೇಳುತ್ತಾಳೆ. ಅವಳು ಓಡಿ ಹೋದಾಗ ಅವಳಿದ್ದ ಹೌಸಿಂಗ ಬೋರ್ಡ ಕಾಲೋನಿಯ ಅವಳ ಮನೆಗೆ ಬೆಂಕಿ ಬೀಳುತ್ತದೆ. ಕೋಮು ಗಲಭೆ ಶುರುವಾಗುತ್ತದೆ. ಅವಳ ಮನೆ ಕೋಮು ಗಲಭೆಯಲ್ಲಿ ಬೆಂಕಿಗೆ ಆಹುತಿಯಾಗುತ್ತದೆ.

ಈ ನಾಡಿಗೆ ಸ್ವಾತಂತ್ರ್ಯ ಬಂದಾಗ ಅದನ್ನು ಅನುಭವಿಸಲು ನಾಡನ್ನು ಅಭಿವೃದ್ಧಿ ಪಡಿಸಲು ನಮ್ಮ ಜನರಿಗೆ ಅರ್ಹತೆ ಬೇಕು. ಎಲ್ಲ ಅಧಿಕಾರ ಕಳ್ಳರ, ಸುಳ್ಳರ ಢೋಂಗಿಗಳ ಪಾಲಾಗಿದೆ. ಇದರಿಂದ ನಾಡಿಗೆ ಅಭಿವೃದ್ಧಿ ಹೇಗೆ ಸಾಧ್ಯ ವೆಂದು ಚಿಂತಿಸುವ ಚಂದ್ರಕಾಂತ ಕುಸನೂರರು ತನ್ನ ಕಥಾನಾಯಕನನ್ನು ತಾರ್ಕಿಕವಾಗಿ ಚಿತ್ರಿಸಿದ ರೀತಿ ಓದುಗರ ಮನಸೆಳೆಯುವುದಿಲ್ಲ. ರವೀಂದ್ರನ ನಿರ್ಲಕ್ಷ್ಯದಿಂದ ಮಾಲತಿ ಹಳ್ಳಿ ತೊರೆದು ಮುಂಬೈ ಸೇರುತ್ತಾಳೆ. ತನ್ನ ಬೇಜವಾಬ್ದಾರಿತನದಿಂದಾಗಿ ಮಾಲತಿಯನ್ನು ಕಳೆದುಕೊಂಡು ತಪ್ಪಿನ ಅರಿವಾದಾಗ ಅವಳನ್ನು ಹುಡುಕುತ್ತ ಮುಂಬೈಗೆ ಹೋಗುವುದು, ಜನ ನಿಬಿಡ ಪ್ರದೇಶದಲ್ಲಿ ಅವಳನ್ನು ಹುಡುಕುತ್ತ ನಿಲ್ಲುವುದು ಹಾಸ್ಯಾಸ್ಪದ ಎನಿಸುತ್ತದೆ. ಒಬ್ಬ ಶಿಕ್ಷಕ ನಾಗಿ ಬ್ರಾಹ್ಮಣ ಶ್ರೇಷ್ಠನಾಗಿ ಯಾವುದು ಸರಿ ಯಾವುದು ತಪ್ಪು ಎಂದು ತಿದ್ದಿಹೇಳುವ ಆತನೇ ಭವ ಬದುಕಿನ ಎಳೆತ ಸೆಳೆತಗಳಿಗೆ ಬಲಿಯಾಗಿ ಒದ್ದಾಡುವುದು, ಮಾಲತಿಯ ಬಗ್ಗೆ ಕೀಳು ಅಭಿಪ್ರಾಯ ತಾಳುವುದು ಆತನ ವ್ಯಕ್ತಿತ್ವಕ್ಕೆ ಕುಂದು ತರುತ್ತದೆ. 'ಈ ನಗರದಲ್ಲಿದ್ದರೆ ಮಾಲತಿ ಏನು ಮಾಡುತ್ತಿರಬೇಕು? ಮೈದಣಿಯುವ ತನಕ ಮನಸ್ಸು ತಣಿಯುವ ತನಕ ಹಿಚುಕಿಸಿಕೊಳ್ಳುತ್ತಿರಬೇಕು. ಇಲ್ಲಾಂದ್ರ ಕಾಮಾಟಿಪುರದಲ್ಲಿ ಕೇಜಿನಲ್ಲಿ ನಗ್ನಾವಸ್ಥೆಯಲ್ಲಿ ಬಿದ್ದು ನರ ಪಶುಗಳಿಗೆ ತುಂಡುದೇಹ ನೀಡುತ್ತಿರಬೇಕು. ಅಸಹ್ಯ ವೇದನೆಯಿಂದ ಚೀರುತ್ತಿರಬೇಕು (ಪು :೨೬೯) ಎಂಬಲ್ಲಿ ರವೀಂದ್ರನ ಕೊಳಕು ಆಲೋಚನೆಗಳ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ. ಈ ಕಾದಂಬರಿಯ ನಾಯಕ ರವೀಂದ್ರ ಕೊನೆಯಲ್ಲಿ ಹೇಳುವ 'ರಸ್ತೆಯುದ್ದಕ್ಕೂ ಗಂತವ್ಯ ಅರಿಯದೆ ಸುಮ್ಮನೆ ನಡೆದೆ, ದರೋಡೆಕೋರರ ಕೈಗೆ ಸಿಕ್ಕು ಎಲ್ಲವನ್ನೂ ಕಳೆದುಕೊಂಡು ಕಂಗಾಲಾದ ಶ್ರೀಮಂತನಂತೆ ನನ್ನ ಬದುಕು ಬರಿದಾದ್ದನ್ನು ಕಂಡು ಮಂಕಾದೆ (ಪು: ೨೭೦) ಎಂದು ಹತಾಶ ಸ್ಥಿತಿಗೆ ತಲುಪುವುದು ಅಸಂಗತ ಬೆಳವಣಿಗೆ ಯಾಗಿದೆ.

ಒಬ್ಬ ಶಿಕ್ಷಕನಾಗಿ ರವೀಂದ್ರ ಈ ಭಾಗದ ಸಮಾಜ ಸುಧಾರಣೆ, ಶೈಕ್ಷಣಿಕ ಸುಧಾರಣೆ, ಸ್ವಾತಂತ್ರ್ಯಾನಂತರದ ಗ್ರಾಮೀಣ ಸಮಾಜ ಮುನ್ನಡೆಸುವ ರೀತಿ ನೀತಿಗಳ ಕುರಿತು ಆಲೋಚಿಸಬಹುದಾಗಿತ್ತಾದರೂ ಪಲಾಯನವಾದಿಯಾಗಿ, ಮಾಲತಿ, ಗೊಹೆರ್

ಜಾನ್ ಎಂದೆಲ್ಲ ತಲೆ ಕೆಡಿಸಿಕೊಂಡು ಯಾರಿಗೂ ನ್ಯಾಯ ಕೊಡದೆ ಕರ್ತವ್ಯ ವಿಮುಖನಾಗಿ ವರ್ತಿಸಿದುದು ಅನುಕರಣೀಯ ಬೆಳವಣಿಗೆಯಲ್ಲ. ಆದರೂ ಕುಸನೂರರು ಬ್ರಾಹ್ಮಣ ಕುಟುಂಬದ ಮೂರು ತಲೆ ಮಾರಿನ ಚಿತ್ರಣವನ್ನು ಈ ಕಾದಂಬರಿಯ ಮೂಲಕ ಕೊಟ್ಟು ಹೈದರಾಬಾದ್ ಕರ್ನಾಟಕದ ಅಂದಿನ ಸಾಮಾಜಿಕ ಶೈಕ್ಷಣಿಕ, ರಾಜಕೀಯ ವಾತಾವರಣ, ಬದಲಾದ ಜನರ ಅಭಿರುಚಿಗಳನ್ನು ಹಾಗೂ ಸ್ವತಃ ನಾಯಕನೆನಿಸಿಕೊಂಡ ರವೀಂದ್ರನ ಕಾಮ ಬದುಕಿನ ನಾನಾ ಆಯಾಮಗಳನ್ನು ಚಿತ್ರಿಸಿ ವಾಸ್ತವ ಚಿತ್ರಣ ನೀಡಿದ್ದಾರೆ. ಆಸ್ತಿ ಅಂತಸ್ತು, ಜಾತಿ ರಾಜಕಾರಣಕ್ಕಾಗಿ ಇಲ್ಲಿಯ ಪಾತ್ರಗಳು ಹೇಗೆ ಬಡಿದಾಡುತ್ತವೆಂಬುದು ಅಧ್ಯಯನ ಯೋಗ್ಯವಾಗಿದೆ. ವಿವಿಧ ಜಾತಿ ಜನಾಂಗದ ಅಸ್ತಿತ್ವದ ಹೋರಾಟಗಳು, ಪ್ರೀತಿಯ ತಾಕಲಾಟಗಳು ಓದುಗರನ್ನು ಬೆರಗುಗೊಳಿಸುತ್ತವೆ. ಕುಸನೂರರ ಪ್ರಾದೇಶಿಕ ಪ್ರೀತಿ ಹಾಗೂ ಗ್ರಾಮೀಣ ಬದುಕಿನ ದಟ್ಟ ಸಂವೇದನೆಗಳಿಗೆ ಈ ಕಾದಂಬರಿ ಮಾದರಿಯಾಗಿ ನಿಲ್ಲುತ್ತದೆ.